# ನಟನೆಗೆ ಟೀವಿ ವೇದಿಕೆ

**ದಿಲೀಪ್ ಶೆಟ್ಟಿ**
**ಉದಯದ 'ಕಸ್ತೂರಿ ನಿವಾಸ'ದ ರಾಘವ್**

◆ **ದುಬೈದಲ್ಲಿ ಆರಾಮಾಗಿದ್ದೆ ಮರಳಿ ಏಕಾದರೂ ಬಂದೆ ಎಂದು ಎಂದಾದರೂ ಅನ್ನಿಸಿದೆಯೇ?**

ನಟನೆಯನ್ನು ಆರಂಭಿಸಿದ ಮೊದಲು ಎರಡು ವಾರ ಹಾಗೆ ಅನ್ನಿಸಿತ್ತು. ಬಹುತೇಕರಿಗೆ ಹಾಗೆಯೇ ಅನ್ನಿಸಬಹುದು. ಪ್ರದೇಶದ ಜೊತೆ ಜೀವನಶೈಲಿಯೂ ಬದಲಾಗುವುದರಿಂದ ಪ್ರದೇಶಕ್ಕೆ ಹೊಂದಿಕೊಳ್ಳುವ ಜೊತೆಗೆ ನಮ್ಮಲ್ಲೂ ಬದಲಾವಣೆಯನ್ನು ತಂದುಕೊಳ್ಳಬೇಕಾಗುತ್ತದೆ. ಕ್ರಮೇಣ ಅದೆಲ್ಲ ಸರಿಹೋಯಿತು. ನನಗೇನೂ ಕರ್ನಾಟಕ ಹೊಸದೇನೂ ಅಲ್ಲ. ನಮ್ಮ ಮೂಲ ಮಂಗಳೂರು. ಹುಟ್ಟಿ ಬೆಳೆದಿದ್ದೆಲ್ಲ ಅಲ್ಲೇ. ಮರಳಿದ ನಂತರ ಇಲ್ಲಿ ಹೊಂದಿಕೊಳ್ಳುವುದು ನನಗೆ ಕಷ್ಟ ಆಗಲಿಲ್ಲ. ಬದುಕಿನಲ್ಲಿ ಏರಿಳಿತಗಳು ಇದ್ದೇ ಇರುತ್ತವೆ. ಅದು ನನ್ನ ಜೀವನದಲ್ಲಿಯೂ ಆಗಿದೆ. ಅದನ್ನು ಜೀವನ ಭಾಗ ಎಂದೇ ನಾನು ಅಂದುಕೊಂಡಿದ್ದೇನೆ. ಅಷ್ಟು ಮಾತ್ರ ಅಲ್ಲ ಅದೆಲ್ಲವೂ ಸ್ಮರಣೀಯ ಕೂಡ ಹೌದು. ದುಬೈನಿಂದ ಬಂದ ಆರಂಭದ ದಿನಗಳಲ್ಲಿ ಒಂದಿಷ್ಟು ಕಷ್ಟ ಆಯಿತು.

◆ **'ಕಸ್ತೂರಿ ನಿವಾಸ'ಕ್ಕೆ ಬಣ್ಣದ ಹಚ್ಚಿದ ನಂತರ ನಿಮ್ಮನ್ನು ರಾಜ್‌ಕುಮಾರ್ ಕಾಡಿದ್ದು ಉಂಟಾ?**

ನಮ್ಮ ಧಾರಾವಾಹಿಯ ಹೆಸರು ಹೇಳಿದ ತಕ್ಷಣ ಅತ್ಯಂತ ಜನಪ್ರಿಯ ಸಿನಿಮಾ 'ಕಸ್ತೂರಿ ನಿವಾಸ' ಕಣ್ಣ ಮುಂದೆ ಬಂದು ನಿಲ್ಲುವುದು ಸಹಜ. ಸಿನಿಮಾಕ್ಕೂ ಧಾರಾವಾಹಿಗೂ ಯಾವುದೇ ಸಂಬಂಧ ಇಲ್ಲ. ತುಂಬಿದ ಮನೆಯ ಕಥೆಯನ್ನು ಇದು ಒಳಗೊಂಡಿದೆ. ತುಂಬ ಸೊಗಸಾದ ಪಾತ್ರ ಎಂದು ಇದನ್ನು ನಾನು ಒಪ್ಪಿಕೊಂಡಿದ್ದೇನೆ. ಬಣ್ಣ ಹಚ್ಚಿದ ನಂತರ ನನಗೆ ಗೊತ್ತಾಗಿದ್ದು ಏನೆಂದರೆ ಸಿನಿಮಾ ಕಥೆಯೇ ಬೇರೆ. ಆದರೆ ರಾಜಕುಮಾರ್ ಅವರ ಗಾಯನ ಎಂದೆಂದೂ ಕಾಡದೆ ಇರುವುದಿಲ್ಲ. ಖಂಡಿತ ರಾಜಣ್ಣ ನೆನಪಾಗುತ್ತಾರೆ. ವೀಕ್ಷಕರ ಮನಸನ್ನು ಸೆಳೆಯುವ ಗುಣ ನನ್ನ ಪಾತ್ರದ್ದಾಗಿದೆ.

◆ **ಅಭಿನಯವನ್ನು ಕಲಿತಿದ್ದು ಹೇಗೆ?**

ಧಾರಾವಾಹಿಗೆ ಬಂದ ಮೇಲೆ ನಾನು ನಟನೆಯನ್ನು ಕಲಿಯಲು ಆರಂಭಿಸಿದೆ. ಇದಕ್ಕೂ ಮುನ್ನ ಜಾಹೀರಾತುಗಳಲ್ಲಿ ನಟಿಸುತ್ತಿದ್ದೆ. ಆದರೆ ಅಭಿನಯ ಎನ್ನುವ ವಿಚಾರ ಬಂದಾಗ ಟೀವಿಗೆ ಬಂದ ನಂತರವೇ ಕಲಿತಿದ್ದು. ನನ್ನ ಕಲಿಕೆಗೆ ಗುರುಗಳಾಗಿ ಬಂದವರು ನನ್ನ ಸಹನಟರು. ಇವರ ಜೊತೆ ನಿರ್ದೇಶಕರದೂ ಸಮಾನ ಪಾಲಿದೆ. ನಿರ್ದೇಶಕರ ಸೂಚನೆಗಳಿಂದಲೇ ನನ್ನಲ್ಲಿನ ಒಬ್ಬ ಕಲಾವಿದ ಬೆಳೆದಿದ್ದಾನೆ.

◆ **ನಟನೆಗೆ ಪ್ರೇರಣೆ ಸಿಕ್ಕಿದ್ದು ಹೇಗೆ?**

ಹೆಸರು ಮಾಡಬೇಕು. ಖ್ಯಾತಿಗಳಿಸಬೇಕು ಎನ್ನುವ ಕನಸು ನನಗಿತ್ತು. ಆದರೆ, ನಟನೆಯಿಂದ ಹೆಸರು ಮಾಡಬೇಕು ಎಂದು ಎಂದೂ ಅಂದುಕೊಂಡಿರಲಿಲ್ಲ. ಆದರೆ ಅದಕ್ಕೆಂದು ನನಗೊಂದು ಸುವರ್ಣ ಅವಕಾಶ ಸಿಕ್ಕಿತು. ಆ ಮೂಲಕ ಭಾರತಕ್ಕೆ ಮರಳುವ ಸಂದರ್ಭವೂ ನನಗೆ ಸಿಕ್ಕಿತು. ದೂರದ ದುಬೈಯನ್ನು ಬಿಟ್ಟು ಮನೆಯಲ್ಲಿ ಎಲ್ಲರ ಜೊತೆಗೆ ಇರಬಹುದು ಎನ್ನುವ ಬಯಕೆಯೂ ಕಾರಣ. ಅಭಿನಯವನ್ನು ಕಲಿಯಲು ಅವಕಾಶ ಒಂದು ಸಿಕ್ಕಿತು ಎಂದೇ ಬಂದೆ.

ಝೀ ಕನ್ನಡದ 'ವಿದ್ಯಾವಿನಾಯಕ' ಮೊದಲ ಧಾರಾವಾಹಿ. ಮೊದಲ ದಿನದ ಕ್ಯಾಮೆರಾ ಎದುರಿಸಿದ ಅನುಭವ ತುಂಬ ಭಿನ್ನವಾಗಿತ್ತು. ಏಕೆಂದರೆ ಈ ಮೊದಲು ಎಂದು ನಾನು ಹೆದರಿರಲಿಲ್ಲ. ಚಿತ್ರೀಕರಣದ ದಿನ ಅಲ್ಲಿ ನೆರೆದಿದ್ದ ಬಹುತೇಕರು ಅಭಿನಯವನ್ನು ಚೆನ್ನಾಗಿ ಮಾಡಬಲ್ಲವರಾಗಿದ್ದರು. ಅಭಿನಯ ನನಗೆ ಗೊತ್ತಿಲ್ಲ ಎಂಬ ಅಳುಕು ನನ್ನಲ್ಲಿ ದುಗುಡವನ್ನು ಹುಟ್ಟಿಸಿತ್ತು. ಅದನ್ನು ಮೆಟ್ಟಿ ನಾನು ಮುಂದುವರಿದೆ, ಕಲಿಯಲು ಸಿಕ್ಕ ಒಳ್ಳೆಯ ಅವಕಾಶವನ್ನು ಬಳಸಿಕೊಂಡೆ ಎನ್ನುವ ಸಾರ್ಥಕ ಭಾವ ನನಗಿದೆ. ಅತ್ಯಂತ ಕಡಿಮೆ ಅವಧಿಯಲ್ಲಿ ಒಳ್ಳೆಯ ಹೆಸರನ್ನು ಅದು ನನಗೆ ಕೊಟ್ಟಿದೆ.

◆ **ಮುಂದಿನ ಯೋಜನೆ?**

ಸದ್ಯ ಒಂದು ಸಿನಿಮಾದಲ್ಲಿ ನಟಿಸಿದ್ದೇನೆ. ಅದರ ಬಿಡುಗಡೆಗಾಗಿ ಕಾಯುತ್ತಿದ್ದೇನೆ. ಅದು ದೊಡ್ಡ ಸ್ಕ್ರೀನ್ ಮಾತ್ರ ಅಲ್ಲ, ದೊಡ್ಡ ಪ್ರಾಜೆಕ್ಟ್ ಕೂಡ. ಈಗಲೇ ಅದನ್ನು ಬಹಿರಂಗ ಪಡಿಸಲು ನನಗೆ ಇಷ್ಟ ಇಲ್ಲ. ಮುಂದೆಯೂ ಸಿನಿಮಾದ ಮೇಲೆ ಗಮನ ಕೇಂದ್ರೀಕರಿಸಿದ್ದೇನೆ. ತೆಲುಗಿನ ಒಂದು ಧಾರಾವಾಹಿಯಲ್ಲಿಯೂ ನಟಿಸಿದ್ದೇನೆ. ಕಲಾವಿದನಿಗೆ ಟೀವಿ– ಸಿನಿಮಾ ಎನ್ನುವ ಎರಡು ವರ್ಗೀಕರಣ ಎದುರಾಗುತ್ತವೆ. ನಟನೆಗೆ ಸಂಬಂಧಿಸಿದಂತೆ ಹೇಳುವುದಾದರೆ ಟೀವಿ ಒಂದನ್ನು ಕಲಿಸಿದರೆ ಸಿನಿಮಾ ಮತ್ತೊಂದನ್ನು ಕಲಿಸುತ್ತದೆ. ಇಲ್ಲಿ ಕಲಿಯುವ ಕ್ರಿಯೆ ಬಹುಮುಖ್ಯ. ಎಲ್ಲರಿಗೂ ಸಿನಿಮಾ ದೊಡ್ಡ ಆಕರ್ಷಣೆಯ ಬಯಕೆಯಾಗಿ ಕಾಣಿಸುತ್ತದೆ. ಟೀವಿ ಕಲಿಕೆ ಅನೇಕ ಅವಕಾಶಗಳನ್ನೇ ತೆರೆದು ಇಟ್ಟಿರುತ್ತದೆ. ನನಗೊಂದು ಐಡೆಂಟಿಟಿಯನ್ನು ಕೊಟ್ಟಿದ್ದು ಟೀವಿ.

◆ **ನಿಮ್ಮನ್ನು ಗುರುತಿಸಿದಾಗ ಹೇಗೆನಿಸುತ್ತದೆ?**

ಪ್ರಸ್ತುತ ಸಮಾಜದಲ್ಲಿ ಎಲ್ಲರೂ ಅವರದೇ ಆದ ಕೆಲಸದಲ್ಲಿ ಬಿಜಿಯಾಗಿರುತ್ತಾರೆ. ಯಾರು ಯಾರನ್ನೂ ಮಾತನಾಡಿಸುವಷ್ಟು ಪುರುಸೊತ್ತು ಇರಲ್ಲ. ಅದಕ್ಕೆ ಅವಕಾಶವೂ ಇಲ್ಲದಷ್ಟು ಅವರದೇ ಕೆಲಸಗಳು ಇರುತ್ತವೆ. ಅಷ್ಟರ ನಡುವೆ ನಮ್ಮನ್ನು ಗುರುತಿಸಿ ಮಾತನಾಡಿಸುತ್ತಾರೆ ಅಂದರೆ, ಅದು ನಿಜಕ್ಕೂ ದೇವರ ಕಾಣಿಕೆ ಎಂದೇ ನಾನು ಭಾವಿಸುತ್ತೇನೆ. ಅಪರಿಚಿತರೊಬ್ಬರು ನಮ್ಮ ಪಾತ್ರವನ್ನು ಮೆಚ್ಚಿ ಪ್ರೀತಿಯಿಂದ ಮಾತನಾಡಿಸುವುದು ಖುಷಿಯನ್ನು ಕೊಡುತ್ತದೆ.



■ **ರಾಘವೇಂದ್ರ ಕೆ.**